**ದಿನಾಂಕಃ28-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ.ಜೆ.ಕೆ.ಆರ್.ವಕೀಲರಿಂದ**

8. ಆರೋಪಿ ಹಣ ಕೇಳಿದ ಸಮಯದಲ್ಲಿ ಎಲ್ಲಿ ಗುತ್ತಿಗೆ ಕೆಲಸ ಮಾಡುತ್ತಿದ್ದ ಎಂದು ತಿಳಿದುಕೊಂಡಿಲ್ಲ. ಆರೋಪಿ ಗುತ್ತಿಗೆ ಕೆಲಸ ಮಾಡುತ್ತಿದ್ದರೋ ಇಲ್ಲವೋ ಎನ್ನುವ ಬಗ್ಗೆ ಬೇರೆ ಯಾರಿಗೂ ಕೇಳಿಲ್ಲ. ಆರೋಪಿ ಅವರ ಅಂಗಡಿಯಲ್ಲಿ ಸಂಜೆಯ ಮೇಲೆ ಹಣ ಕೇಳಿದರು. ಆಗ ನಾನು ಹಾಗೂ ಆರೋಪಿ ಇಬ್ಬರೇ ಇದ್ದೇವು. ಆರೋಪಿ ಹಣ ಕೇಳಿದ ನಂತರ 1 1/2 ಗಂಟೆ ಸಮಯದ ನಂತರ ಹಣ ಕೊಟ್ಟಿರುತ್ತೇನೆ. ಹಣ ಕೊಟ್ಟಾಗ ಆರೋಪಿ ಬಳಿ ದಾಖಲಾತಿಗಳನ್ನು ಕೇಳಿಲ್ಲ. ಹಣ ಕೊಟ್ಟ ದಿನವೇ ಆರೋಪಿ ನಿಪಿ.1 ನ್ನು ಕೊಟ್ಟರು. ಚೆಕ್ ನ್ನು ಆರೋಪಿಯೇ ಭರ್ತಿ ಮಾಡಿಕೊಟ್ಟಿರುತ್ತಾರೆ. ಹೆಚ್ಚಿನ ಮೊತ್ತದ ಕೊಡುತ್ತಿದ್ದು ಈ ಬಗ್ಗೆ ಅವರ ಮನೆಯವರನ್ನು ವಿಚಾರಸಿಲ್ಲ.

9. ಆರೋಪಿಗೆ ಹಣ ವಾಪಸ್ಸು ಕೊಡುವ ಸಾಮರ್ಥ್ಯ ಬಗ್ಗೆ ನಾನು ತಿಳಿದುಕೊಂಡಿಲ್ಲ. ಹಣ ಕೊಡುವಾಗ ಸಾಕ್ಷಿಯನ್ನು ಇಟ್ಟುಕೊಡಲು ತೊಂದರೆ ಇರಲಿಲ್ಲ. ನನ್ನ ವಾರ್ಷಿಕವಾಗಿ 6 ರಿಂದ 7 ಲಕ್ಷ ರೂ. ಆದಾಯ ಬರುತ್ತದೆ. ಈ ಬಗ್ಗೆ ದಾಖಲಾತಿಗಳು ಇಲ್ಲ. 2018 ರಲ್ಲಿ ನನಗೆ ಅಷ್ಟು ಆದಾಯ ಇತ್ತು ಎಂದು ತೋರಿಸಲು ದಾಖಲಾತಿಗಳನ್ನು ಕೊಟ್ಟಿದ್ದೇನೆ. ದಿನಾಂಕಃ 31-10-2018 ರಂದು ನಿಪಿ.6 ನ್ನು ಬರೆದುಕೊಟ್ಟ ದಿನ 2,53,000/- ನಗದಾಗಿ ನನಗೆ ಕೊಟ್ಟಿರುತ್ತಾರೆ. ಆ ದಿನ ಪದ್ಮಾವತಿ ಅವರ ನನಗೆ ಯಾವುದೇ ನಗದಾಗಿ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ.7 ರಲ್ಲಿ ಹೇಳಿರುವ ಆಸ್ತಿಯೂ ನನಗೆ ಸೇರಿರುವ ಆಸ್ತಿ ಎಂದು ತೋರಿಸಲು ದಾಖಲಾತಿಗಳನ್ನು ಕೊಟ್ಟಿಲ್ಲ. ನಿಪಿ.6 ಮತ್ತು 7 ರ ಪತ್ರಗಳಿಂದ ಬಂದ ಪೂರ್ತಿ ಹಣವನ್ನು ಆರೋಪಿಗೆ ಕೊಟ್ಟಿರುತ್ತೇನೆ. ಇದೇ ಪತ್ರಗಳ ವ್ಯವಹಾರದಿಂದ ಬಂದ ಹಣವನ್ನು ಬೇರೆ ಅವರಿಗೆ ಕೊಟ್ಟಿರುವುದಾಗಿ ಬೇರೆ ಪ್ರಕರಣದಲ್ಲಿ ಯಾವುದೇ ಸಾಕ್ಷಿ ನುಡಿದಿಲ್ಲ.

10. ಹಣ ಕೊಟ್ಟಾಗ ಬಡ್ಡಿ ಕೇಳಿಲ್ಲ. ಆರೋಪಿ ನನಗೂ ಸಹ ಸಾಲ ಕೊಡುತ್ತಿದ್ದರಿಂದ ಬಡ್ಡಿ ಕೇಳದೇ ಕೊಟ್ಟಿರುತ್ತೇನೆ. ಹಣ ಕೊಟ್ಟ ನಂತರ ಆರೋಪಿ ಗುತ್ತಿಗೆ ಕೆಲಸ ಮಾಡುತ್ತಿರುವ ಬಗ್ಗೆ ಕೇಳಿ ತಿಳಿದುಕೊಂಡಿಲ್ಲ. ನಾನು ದೂರಿನಲ್ಲಿ ಹೇಳಿರುವಂತೆ ಆರೋಪಿಯ ಬಳಿ ಯಾವುದೇ ಸಾಲ ಪಡೆದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನಾಗಮಂಗಲ.

ಸಾಕ್ಷಿದಾರರ ಸಹಿಃ